ಜೆಎಸ್‌ಎಸ್ ಮಹಾವಿದ್ಯಾಪೀಠ

**ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು**

(ಸ್ವಾಯತ್ತ)

ಬಿ.ಎನ್. ರಸ್ತೆ, ಮೈಸೂರು – 570 025

ಪ್ರಚ್ಛನ್ನ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ

(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)

Ph: 0821-2548236 & 2548380. FAX: 0821-2548238 E-mail: jssautonomous@gmail.com Website: JSSCACS.edu.in

ದಿನಾಂಕ : 12.01.2018

ಪ್ರಕಟಣೆಯ ಕೃಪೆಗಾಗಿ

## 'ವಿದ್ಯಾರ್ಥಿಗಳು ಭವ್ಯವಾದ ಕನಸನ್ನು ಕಾಣಬೇಕು'

– ಡಾ. ಆರ್. ರಮಣನ್

ಮೈಸೂರು ಬಿ.ಎನ್ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಹತ್ತನೆಯ ಪದವೀಧರರ ದಿನಾಚರಣೆಯ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿದ ಅಟಲ್ ನವೀನತಾ ಆಯೋಗದ ನಿರ್ದೇಶಕರು ಮತ್ತು ಭಾರತ ಸರ್ಕಾರ, ನೀತಿ ಆಯೋಗದ ಹೆಚ್ಚುವರಿ ಕಾರ್ಯದರ್ಶಿಗಳಾದ ಡಾ. ಆರ್. ರಮಣನ್ ವಿವೇಕನಂದರ ಜನ್ಮದಿನದಂದು ಪದವಿ ಸ್ವೀಕರಿಸುತ್ತಿರುವ ನೂತನ ಪದವೀರರಿಗೆ, ಅವರ ತಂದೆ ತಾಯಿಯರಿಗೆ ಗುರುಗಳಿಗೆ ವಿದ್ಯೆನೀಡಿದ ವಿದ್ಯಾಸಂಸ್ಥೆಗೆ ಅಭಿನಂದನೆಗಳನ್ನು ಸಲ್ಲಿಸಿ "ನೂತನ ಪದವೀಧರರು ಭವ್ಯವಾದ ಕನಸನ್ನು ಕಾಣಬೇಕು" ಎಂದು ಕರೆಕೊಟ್ಟರು. ಮುಂದುವರೆದು "ಮಹತ್ವಾಕಾಂಕ್ಷೆಯ ಕನಸಿನಿಂದ ಡಾ. ಅಬ್ದುಲ್ ಕಲಾಂ ಅವರು ಅದ್ಭುತವಾದದ್ದನ್ನು ಸಾಧಿಸಿದರು. ಕನಸಿನಿಂದ ಹೊಸಸೃಷ್ಟಿ ಸಾಧ್ಯವೆಂದು ಹಲವು ಸಾಧಕರು ಸಾಧಿಸಿ ತೋರಿಸಿದ್ದಾರೆ. ತಂತ್ರಜ್ಞಾನದ ಈ ಯುಗದಲ್ಲಿ ಯುವಸಮುದಾಯಕ್ಕೆ ಸಾಕಷ್ಟು ಅವಕಾಶಗಳಿವೆ. ಅವುಗಳ ಸದ್ಬಳಕೆಯ ಮೂಲಕ ಉದ್ಯೋಗದಾತರೇ ಆಗಬಹುದು. ಇಂದಿನ ತಂತ್ರಜ್ಞಾನದ ಕಲಿಕೆಯ ಅನೇಕ ಪ್ರಕಾರಗಳನ್ನು ಬಳಸಿಕೊಂಡು ನೂತನ ಆವಿಷ್ಕಾರಗಳ ಮೂಲಕ ಹೊಸಹೊಸದರ ಅನ್ವೇಷಕರಾಗಿ ಪ್ರಗತಿಯ ಕಡೆಗೆ ಬದಲಾವಣೆಗಳನ್ನು ಮಾಡುತ್ತಾ ಬೇರೆಯವರಿಗಿಂತ ವಿಭಿನ್ನವಾಗಬಹುದು. ಇಂದು ಭಾರತದ ಯುವಸಂಪತ್ತು ಪ್ರಪಂಚದಲ್ಲಿಯೇ ಅನನ್ಯವಾಗಿದೆ. ಆ ಅವಕಾಶವನ್ನು ನಿಮಗಾಗಿ, ನಿಮ್ಮ ಕುಟುಂಬಕ್ಕಾಗಿ, ದೇಶಕ್ಕಾಗಿ, ಜಗತ್ತಿಗಾಗಿ ಅದ್ಭುತವಾಗಿ ಬಳಸಿಕೊಳ್ಳಬೇಕು. ಎಲ್ಲಕ್ಕೂ ಕಳಶಪ್ರಾಯವಾಗಿ ನೈತಿಕ ಮೌಲ್ಯ ಮತ್ತು ಪರಿಶುದ್ಧತೆಯನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು" ಎಂದು ಕಿವಿಮಾತು ಹೇಳಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಮುಖ್ಯ ನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ. ಜಿ. ಬೆಟಸೂರಮಠ ಅವರು ಪದವೀಧರ ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ಇದೇ ಸಂದರ್ಭದಲ್ಲಿ ಅತಿ ಹೆಚ್ಚು ಅಂಕ ಪಡೆದ ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳನ್ನು ಪುರಸ್ಕರಿಲಾಯಿತು.

ಕಾಲೇಜು ಸಮುಚ್ಚಯದ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಸ್ವಾಗತ ಕೋರಿದರು. ಪ್ರೊ. ಡಿ. ಎಸ್. ಸದಾಶಿವಮೂರ್ತಿಯವರು ಕಾರ್ಯಕ್ರಮವನ್ನು ನಿರೂಪಿಸಿದರು. ಪ್ರಾಂಶುಪಾಲರಾದ ಪ್ರೊ. ಎಂ. ಮಹದೇವಪ್ಪನವರು ವಂದಿಸಿದರು. ಜೆಎಸ್‌ಎಸ್ ಮಹಾವಿದ್ಯಾಪೀಠ, ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕರಾದ ಪ್ರೊ. ಟಿ ಡಿ ಸುಬ್ಬಣ್ಣನವರು, ಸಾಮಾನ್ಯ ಆಡಳಿತ ವಿಭಾಗದ ನಿರ್ದೇಶಕರು–2 ಶ್ರೀ ಮಠ ಮಲ್ಲಿಕಾರ್ಜುನ್‌ರವರು ಮತ್ತು ಕಾಲೇಜಿನ ಮುಖ್ಯ ಪರೀಕ್ಷಾ ನಿಯಂತ್ರಣಾಧಿಕಾರಿಗಳಾದ ಡಾ.ಬಿ.ಪ್ರಭುಸ್ವಾಮಿ ಅವರು ಉಪಸ್ಥಿತರಿದ್ದರು. ಕು. ಲಾಸ್ಯ ಪ್ರಾರ್ಥಿಸಿದರು.

(ಪ್ರೊ ಎಂ ಮಹದೇವಪ್ಪ)
ಪ್ರಾಂಶುಪಾಲರು

ಗೆ.
ಸಂಪಾದಕರು

____________________

____________________